		ಹಾಕಿಕೊಳ್ಳಲಾಗಿದೆ. ಬಳುಂಡಗಿ ಕಾಲುವೆಯನ್ನು ಪ್ರಾರಂಭಿಸಲು ಟೆಂಡರ್ ಆಹ್ವಾನಿಸಲಾಗಿದ್ದು ಮೌಲ್ಯಮಾಪನ ಪ್ರಗತಿಯಲ್ಲಿದೆ.
5	ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕೆಲಸಗಳು	ಬಳುಂಡಗಿ ಪುನರ್ವಸತಿ ಕೇಂದ್ರದ ನಿರ್ಮಾಣದ ಟೆಂಡರ್‌ನ್ನು ವಹಿಸಲಾಗಿರುತ್ತದೆ. ಉಳಿದಂತೆ 10 ಗ್ರಾಮಗಳಿಗೆ ಒಂದು ಕ್ರಿಯಾ ಯೋಜನೆಯನ್ನು ಸಿದ್ದಿಪಡಿಸಲಾಗಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದು ಯೋಜನೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

500 (791) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮ ಪಂಚಾಯಿತಿಯ ಗೌಠಾಣಾ ಪ್ರದೇಶದಲ್ಲಿ ಮಾತ್ರ ಆಶ್ರಯ ಯೋಜನೆ ಹಾಗೂ ಇತರ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂಬುದು ನಿಜವೇ;

ಆ) ಗೌಠಾಣಾ ಪ್ರದೇಶವು ಮುಗಿದಾಗ ವಸತಿ ಯೋಜನೆಯನ್ನು ಯಾವ ವಿಧಾನದಲ್ಲಿ ಅನುಷ್ಠಾನಗೊಳಿಸಲಾಗುವುದು;

ಇ) ಈ ಯೋಜನೆಯನ್ನು ಸ.ನಂ. ನಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಅನುಮೋದನೆ ನೀಡಲು ತಯಾರಾಗಿದೆಯೇ;

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರ ಪರವಾಗಿ):

ಅ) –ಇಲ್ಲ–

ಆ) ಸರ್ಕಾರದ ಆದೇಶ ಸಂ.ವಇ/74/ಹೆಚ್‌ಎಸ್/2000. ದಿನಾಂಕ : 15.09.2000ರನ್ವಯ ಜಮೀನು ಕೊಳ್ಳಲು ಅವಕಾಶವಿದೆ. ಅದರನ್ವಯ ವಸತಿ ಯೋಜನೆಗಾಗಿ ಜಮೀನನ್ನು ಖರೀದಿಸಲಾಗುತ್ತಿದೆ.

ಇ) ಹಿಂದುಳಿದ ವರ್ಗದವರಿಗೆ ವಸತಿ ಕಲ್ಪಿಸುವ ಯೋಜನೆಯಡಿಯಲ್ಲಿ ಭೂ ಪರಿವರ್ತನೆಯಾಗದೇ ಕೃಷಿ ಜಮೀನಿನಲ್ಲಿ ಮನೆ ಕಟ್ಟಲಾಗುವುದಿಲ್ಲ. ಅಂದರೆ ಸ.ನಂ. ನಲ್ಲಿ ಮನೆಗಳನ್ನು ವಸತಿ ನಿವೇಶನದಲ್ಲಿ ಕಟ್ಟಬಹುದು.

501 (862) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಯಾವ ಸಮಯದಿಂದ ಚಾಲನೆಯಲ್ಲಿದೆ;

ಆ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಎಷ್ಟು ಅಪೂರ್ಣವಾಗಿವೆ;

ಇ) ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿ ಪಡಿಸಲಾಗಿದೆಯೆ, ನಿಗದಿ ಪಡಿಸಿದಲ್ಲಿ ಇದರ ವಿವರಗಳೇನು;

ಈ) ಕಳೆದ ಮೂರು ವರ್ಷಗಳಿಂದ ಈ ಯೋಜನೆಗೆ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು? (ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಈ ಯೋಜನೆಗಾಗಿ ರಾಜ್ಯ ಸರ್ಕಾರ ಹಾಗೂ ಇತರೆಡೆಗಳಿಂದ ಬಂದಿರುವ ಹಣವೆಷ್ಟು; ಈ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಗಳ ಬಗ್ಗೆ ಸಾರ್ವಜನಿಕ ದೂರುಗಳಿರುವುದು ನಿಜವೇ; ಒಂದು ವೇಳೆ ದೂರುಗಳಿದ್ದಲ್ಲಿ ಸರ್ಕಾರ ಈ ಬಗ್ಗೆ ಸಂಬಂಧ ಪಟ್ಟವರ ಮೇಲೆ ಕ್ರಮ ಕೈಗೊಳ್ಳುವುದೇ;

ಊ) ಈ ಯೋಜನೆಯಿಂದ ಬಸವಕಲ್ಯಾಣ ಮತಕ್ಷೇತ್ರದ ಎಷ್ಟು ಹಳ್ಳಿಗಳಿಗೆ ಯಾವ ರೀತಿಯಿಂದ ಪ್ರಯೋಜನವಾಗುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣ ನೀರು ಸರಬರಾಜು ಮತ್ತು ಸಕ್ಕರೆ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆಯಡಿ ಬ್ಯಾಚ್–2 ರಡಿಯಲ್ಲಿ ಒಟ್ಟು 50 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ 208 ಗ್ರಾಮಗಳಲ್ಲಿ ತೆಗೆದುಕೊಳ್ಳಲಾಗಿರುವ 208 ನೀರು ಸರಬರಾಜು ಯೋಜನೆಗಳಲ್ಲಿ 192 ಯೋಜನೆಗಳು ಪೂರ್ಣಗೊಂಡಿರುತ್ತವೆ ಮತ್ತು 204 ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಪೈಕಿ 135 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಈ ಎಲ್ಲಾ ಕಾಮಗಾರಿಗಳನ್ನು 2004ರ ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭಿಸಲಾಗಿರುತ್ತದೆ.

ಬ್ಯಾಚ್–3 ರಡಿಯಲ್ಲಿ ಒಟ್ಟು 27 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ 106 ಗ್ರಾಮಗಳಲ್ಲಿ 106 ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದ್ದು, ಇದರ ಯೋಜನಾ ಹಂತ 2005ರ ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭವಾಗಿರುತ್ತದೆ.

(ತಾಲ್ಲೂಕು ವಿವರಗಳನ್ನು ಅಮಬಂಧ–1 ರಲ್ಲಿ ನೀಡಲಾಗಿದೆ)

ಆ) ಬ್ಯಾಚ್–2 ರಡಿಯಲ್ಲಿ ತೆಗೆದುಕೊಳ್ಳಲಾದ ಒಟ್ಟು 208 ಕಾಮಗಾರಿಗಳ ಪೈಕಿ 192 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಇನ್ನುಳಿದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಬ್ಯಾಚ್–3 ರಡಿಯಲ್ಲಿ ತೆಗೆದುಕೊಳ್ಳಲಾದ ಎಲ್ಲಾ 106 ಕಾಮಗಾರಿಗಳ ಯೋಜನಾ ಹಂತವು ಮುಗಿದು, ಅನುಷ್ಠಾನ ಹಂತ ಪ್ರಾರಂಭವಾಗಿರುತ್ತದೆ.

ಇ) ಬ್ಯಾಚ್–2 ರಲ್ಲಿ ಅಪೂರ್ಣವಾಗಿರುವ ನೀರು ಸರಬರಾಜು, ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು 2006 ರ ಅಕ್ಟೋಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು. ಬ್ಯಾಚ್–3 ರಡಿಯ ನೀರು ಸರಬರಾಜು, ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು 2007 ಡಿಸೆಂಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ಕಳೆದ 3 ವರ್ಷಗಳಲ್ಲಿ ಬ್ಯಾಚ್–2 ಮತ್ತು ಬ್ಯಾಚ್–3 ರಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಒಟ್ಟು ರೂ. 63.86 ಕೋಟಿ ವೆಚ್ಚಮಾಡಲಾಗಿರುತ್ತದೆ.

ಯೋಜನಾ ಹಂತದಲ್ಲಿರುವ ಬ್ಯಾಚ್–3 ರಲ್ಲಿ ನೀರು ಸರಬರಾಜು ಕಾಮಗಾರಿಗಳಿಗೆ ರೂ. 4.41 ಕೋಟಿ ವೆಚ್ಚಮಾಡಲಾಗಿರುತ್ತದೆ. (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ).

ಉ) ಜಲ ನಿರ್ಮಲ ಯೋಜನೆಯಡಿ ಈ ಕೆಳಕಂಡಂತೆ ಹಣ ಸ್ವೀಕೃತಿಯಾಗಿರುತ್ತದೆ.

ಅ) ರಾಜ್ಯ ಸರ್ಕಾರ – ರೂ. 83.74 ಕೋಟಿ
ಆ) ಸಮುದಾಯ ವಂತಿಗೆ – ರೂ. 6.43 ಕೋಟಿ
ಇ) ಗ್ರಾಮ ಪಂಚಾಯತಿ ವಂತಿಗೆ – ರೂ. 4.18ಕೋಟಿ
ಒಟ್ಟು ರೂ. 94.36 ಕೋಟಿ

ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಗಳ ಕುರಿತು ಇದುವರೆವಿಗೂ ಯಾವುದೇ ಸಾರ್ವಜನಿಕ ದೂರುಗಳು ಬಂದಿರುವುದಿಲ್ಲ.

ಊ) ಬಸವಕಲ್ಯಾಣ ವಿಧಾನಸಭಾ ಮತಕ್ಷೇತ್ರದ 59 ಹಳ್ಳಿಗಳು ಶುದ್ಧ ಕುಡಿಯುವ ನೀರು ಸೌಲಭ್ಯ ಪಡೆಯುವುದರ ಜೊತೆಗೆ ಆಂತರಿಕ ರಸ್ತೆ ಮತ್ತು ಚರಂಡಿ ಸೌಲಭ್ಯ, ವೈಯಕ್ತಿಕ ಗೃಹ ಶೌಚಾಲಯ, ಶಾಲಾ ಶೌಚಾಲಯ, ಅಂಗನವಾಡಿ ಕೇಂದ್ರಗಳ ಸೌಲಭ್ಯ ಮತ್ತು ಗ್ರಾಮ ಪಂಚಾಯತಿ/ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC) ಸದಸ್ಯರಲ್ಲಿ ಸಾಮರ್ಥ್ಯ ವೃದ್ಧಿಸುವ ಚಟುವಟಿಕೆ ಹೊಂದಿರುವಂತೆ ಸೌಲಭ್ಯ ಪಡೆಯುತ್ತಾರೆ.

ಅನುಬಂಧ–1

ಬ್ಯಾಚ್–2

ಕ್ರ.ಸಂ.	ತಾಲ್ಲೂಕು	ಗ್ರಾಮ ಪಂಚಾಯತ್‌ಗಳ ಸಂಖ್ಯೆ	ಯೋಜನೆಯ ಗ್ರಾಮಗಳ ಸಂಖ್ಯೆ	ಕಾಮಗಾರಿಗಳ ಸಂಖ್ಯೆ	ಯೋಜನೆ ಅವಧಿ
1	ಔರಾದ	10	47	47	
2	ಭಾಲ್ಕಿ	10	45	45	ಸೆಪ್ಟೆಂಬರ್ 2004
3	ಬಸವಕಲ್ಯಾಣ	10	42	42	ರಿಂದ ಆಗಸ್ಟ್ 2006
4	ಬೀದರ	10	45	45	
5	ಹುಮನಾಬಾದ	10	29	29	
	ಒಟ್ಟು	**50**	**208**	**208**	

ಬ್ಯಾಚ್–3

ಕ್ರ.ಸಂ.	ತಾಲ್ಲೂಕು	ಗ್ರಾಮ ಪಂಚಾಯತ್‌ಗಳ ಸಂಖ್ಯೆ	ಯೋಜನೆಯ ಗ್ರಾಮಗಳ ಸಂಖ್ಯೆ	ಕಾಮಗಾರಿಗಳ ಸಂಖ್ಯೆ	ಯೋಜನೆ ಅವಧಿ
1	ಔರಾದ	6	31	31	
2	ಭಾಲ್ಕಿ	6	26	26	ಸೆಪ್ಟೆಂಬರ್ 2005
3.	ಬಸವಕಲ್ಯಾಣ	5	21	21	ರಿಂದ ಡಿಸೆಂಬರ್ 2007

4	ಬೀದರ	5	15	15
5	ಹುಮನಾಬಾದ	5	13	13
	ಒಟ್ಟು	**27**	**106**	**106**

ಅನುಬಂಧ–2

ಬ್ಯಾಚ್–2 ಮತ್ತು ಬ್ಯಾಚ್–3

ಕ್ರಸಂ.	ವಿಧಾನಸಭಾನೀರು ಸರಬರಾಜು, ರಸ್ತೆ ಹಾಗೂ ಚರಂಡಿ ಮತ್ತು ನೈರ್ಮಲ್ಯ ಕಾಮಗಾರಿಗಳು ವೆಚ್ಚ (ರೂ.ಗಳಲ್ಲಿ)		ಕ್ರಸಂ.	ವಿಧಾನಸಭಾ ಕ್ಷೇತ್ರ	ನೀರು ಸರಬರಾಜು, ಕಾಮಗಾರಿಗಳು
	ಕ್ಷೇತ್ರ				
1	ಹುಲಸೂರ	60747948	1	ಹುಲಸೂರ	4321750
2	ಬೀದರ	126328676	2	ಬೀದರ	10732186
3	ಹುಮನಾಬಾದ	105927450	3	ಹುಮನಾಬಾದ	12944587
4	ಭಾಲ್ಕಿ	125954357	4	ಭಾಲ್ಕಿ	5349893
5	ಔರಾದ	122058737	5	ಔರಾದ	6266725
6	ಬಸವಕಲ್ಯಾಣ	97667966	6	ಬಸವಕಲ್ಯಾಣ	4505800
	ಒಟ್ಟು	**638685134**		**ಒಟ್ಟು**	**44120941**

502 (863) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆ :

ಆ) ಈ ಪೈಕಿ ಯಾವ ಯಾವ ಸ್ಥಳಗಳಲ್ಲಿ ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಇ) ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸುವಾಗ ಅನುಸರಿಸುವ ಮಾನದಂಡಗಳೇನು; ಎಷ್ಟು ವಿದ್ಯಾರ್ಥಿಗಳಿಗೆ ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗುವುದು ಹಾಗೂ ಎಷ್ಟು ವಿದ್ಯಾರ್ಥಿಗಳಿಗೆ ಒಂದು ವಿಭಾಗವನ್ನು (ಸೆಕ್ಷನ್) ನಡೆಸಲಾಗುತ್ತಿದೆ ;

ಈ) ಬಹುತೇಕ ಪ್ರೌಢಶಾಲೆಗಳಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ ಸಹ ವಿಭಾಗಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು;

ಉ) ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸುವಾಗ ಹಿಂದುಳಿದ ಬೀದರ್ ಜಿಲ್ಲೆಗೆ ಆದ್ಯತೆ ನೀಡಲಾಗುವುದೇ?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 365

ಆ) ಸರ್ಕಾರದ ಪರಿಶೀಲನೆಯಲ್ಲಿದೆ.